ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	735
ಸದಸ್ಯರ ಹೆಸರು	:	ಶ್ರೀ ಕೆ.ಟಿ. ಶ್ರೀ ಕಂಠೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ	:	17-09-2021.
ಉತ್ತರಿಸುವವರು	:	ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಮಂಜೂರಾದ ಪಿ.ಡಿ.ಓ. ಹುದ್ದೆಗಳೆಷ್ಟು; ಇದರಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು; (ಜಿಲ್ಲಾವಾರು ವಿವರ ಒದಗಿಸುವುದು)	ರಾಜ್ಯದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದದಲ್ಲಿ 6021 ಹುದ್ದೆಗಳು ಮಂಜೂರಾಗಿರುತ್ತವೆ. ಇದರಲ್ಲಿ 728 ಹುದ್ದೆಗಳು ಖಾಲಿ ಇರುತ್ತವೆ. ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ನೀಡಿದೆ.
(ಆ)	ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಯಾವಾಗ (ವಿವರ ಒದಗಿಸುವುದು)	ಪಂಚಾಯತಿ ಅಭಿವೃದ್ಧಿ ಅಧಿಕಾರಿ ವೃಂದಕ್ಕೆ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೇಮಕಾತಿ ಪ್ರಾಧಿಕಾರ ಆಗಿದ್ದು ಗ್ರಾಮ ಪಂಚಾಯತಿ ಕಾರ್ಯದರ್ಶಿ ಗ್ರೇಡ್-1 ವೃಂದದ ಅರ್ಹ ನೌಕರರು ಲಭ್ಯವಾದಂತೆ ಜೇಷ್ಠತೆ ಮತ್ತು ಅರ್ಹತೆ ಆಧಾರದ ಮೇಲೆ ಮುಂಬಡ್ತಿ ಮೂಲಕ ಭರ್ತಿ ಮಾಡಲು ನಿರ್ದೇಶನ ನೀಡಲಾಗಿದೆ.
(ಇ)	ಪಿ.ಡಿ.ಓ. ಹುದ್ದೆಗಳನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರಕ್ಕಿದೆಯೇ;	ಹೌದು.
(ಈ)	ಹಾಗಿದ್ದಲ್ಲಿ ಈ ಪ್ರಸ್ತಾವನೆ ಯಾವ ಹಂತದಲ್ಲಿದೆ? (ವಿವರ ನೀಡುವುದು)	ವಿಕೇಂದ್ರಿಕರಣ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯಿತಿಗಳಿಗೆ ಹೆಚ್ಚಿನ ಜವಾಬ್ದಾರಿ ಮತ್ತು ಪ್ರಕಾರ್ಯಗಳನ್ನು ನೀಡಿರುವ ಹಿನ್ನೆಲೆಯಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಹುದ್ದೆಯನ್ನು ಗ್ರೂಪ್-ಬಿ ವೃಂದಕ್ಕೆ ಉನ್ನತೀಕರಿಸುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿತ್ತು. ಆರ್ಥಿಕ ಇಲಾಖೆಯ ಅಭಿಪ್ರಾಯದ ಮೇರೆಗೆ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹುದ್ದೆಯನ್ನು ಗ್ರೂಪ್ ಬಿ ಹುದ್ದೆಗೆ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು 6ನೇ ಕರ್ನಾಟಕ ರಾಜ್ಯ ವೇತನ ಆಯೋಗದ ಮುಂದೆ ಮಂಡಿಸಲಾಗಿತ್ತು. 6ನೇ ರಾಜ್ಯ ವೇತನ ಆಯೋಗವು ತನ್ನ ವರದಿಯ 2ನೇ ಸಂಪುಟವನ್ನು ಆರ್ಥಿಕ ಇಲಾಖೆಗೆ ಸಲ್ಲಿಸಿದ್ದು, ಗ್ರಾಮ ಪಂಚಾಯತಿಗಳ ಮೇಲ್ದರ್ಜೇಗೇರಿಸುವಿಕೆ ವಿಷಯವು ಸರ್ಕಾರದ ಹಂತದಲ್ಲಿ ಅದರ ಕಾರ್ಯನಿರ್ವಹಣೆಯ ಅಗತ್ಯತೆಗಳನ್ನು ಮತ್ತು ಇತರೆ ತತ್ಸಬಂಧ ಅಂಶಗಳನ್ನು ತೀರ್ಮಾನಿಸಬೇಕಾಗುತ್ತದೆ ಎಂದು ತಿಳಿಸಿರುತ್ತದೆ. ರಾಜ್ಯದ ಗ್ರಾಮ ಪಂಚಾಯತ್‌ಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಯನ್ನು ಗ್ರೂಪ್ ಬಿ ಹುದ್ದೆಯನ್ನಾಗಿ ಮೇಲ್ದರ್ಜೆಗೇರಿಸುವ ಬಗ್ಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: FD/43/Exp-6/2021, ದಿನಾಂಕ:23-06-2021 ರಲ್ಲಿ ಸಾಮಾನ್ಯವಾಗಿ ಯಾವುದೇ ಹುದ್ದೆಯ ವೇತನ ಶ್ರೇಣಿಯನ್ನು ಆಡಳಿತದ ಶ್ರೇಣೀಕೃತ ವ್ಯವಸ್ಥೆ, ಹುದ್ದೆಯ ಕರ್ತವ್ಯ ಮತ್ತು ಜವಾಬ್ದಾರಿ, ಇತರೆ ಇಲಾಖೆಗಳಲ್ಲಿನ ಸಮಾನಾಂತರ

		ಹುದ್ದೆಗಳ ಸಾಮ್ಯತೆ, ಇತ್ಯಾದಿ ಅಂಶಗಳ ಜೊತೆಗೆ, ವೇತನ ಆಯೋಗದಂತಹ ತಜ್ಞ ಸಮಿತಿಗಳ ಶಿಫಾರಸ್ಸಿನ ಬೆಳಕಿನಲ್ಲಿ ಪರಿಶೀಲಿಸಿ ನಿರ್ಧಾರ ಕೈಗೊಳ್ಳಲಾಗುತ್ತದೆ, ಇದು ಸರ್ಕಾರದ ನೀತಿಯಾಗಿರುತ್ತದೆ. ಪ್ರಸ್ತುತ 6ನೇ ರಾಜ್ಯ ವೇತನ ಆಯೋಗವು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆಯ ವೇತನ ಶ್ರೇಣಿಯನ್ನು ಗ್ರೂಪ್–ಸಿ ವೃಂದದಿಂದ ಗ್ರೂಪ್–ಬಿ ವೃಂದದ ವೇತನ ಶ್ರೇಣಿಯ ಹಂತಕ್ಕೆ ಪರಿಷ್ಕರಿಸಿ ಮೇಲ್ದರ್ಜೇಗೇರಿಸಲು ಯಾವುದೇ ನಿರ್ದಿಷ್ಟ ಶಿಫಾರಸ್ಸು ಮಾಡಿಲ್ಲದಿರುವುದರಿಂದ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯು ಒಪ್ಪಿರುವುದಿಲ್ಲ ಎಂದು ತಿಳಿಸಿದೆ.

ಸಂ. ಗ್ರಾಅಪ 333 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:735ಕ್ಕೆ ಅನುಬಂಧ-4

ಕ್ರಸಂ	ಜಿಲ್ಲೆಯ ಹೆಸರು	ಮಂಜೂರಾದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸಂಖ್ಯೆ		ಒಟ್ಟು (3+4)	ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಸಂಖ್ಯೆ		ಒಟ್ಟು (6+7)	ಖಾಲಿ ಇರುವ ಹುದ್ದೆಗಳ ಸಂಖ್ಯೆ		ಒಟ್ಟು (9+10)
		ನೇರ ನೇಮಕಾತಿ	ಮುಂಬಡ್ತಿ ಕೋಟಾ		ನೇರ ನೇಮಕಾತಿ	ಮುಂಬಡ್ತಿ ಕೋಟಾ		ನೇರ ನೇಮಕಾತಿ ಕೋಟಾ	ಮುಂಬಡ್ತಿ ಕೋಟಾ	
1	2	3	4	5	6	7	8	9	10	11
1	ಬಾಗಲಕೋಟೆ	129	69	**198**	129	66	**195**	0	3	**3**
2	ಬೆಂಗಳೂರು (ಗ್ರಾ)	58	47	**105**	58	47	**105**	0	0	**0**
3	ಬೆಂಗಳೂರು (ನ)	62	34	**96**	62	34	**96**	0	0	**0**
4	ಬೆಳಗಾವಿ	329	177	**506**	300	146	**446**	29	31	**60**
5	ಬಳ್ಳಾರಿ	153	83	**236**	130	65	**195**	23	18	**41**
6	ಬೀದರ್	120	65	**185**	113	40	**153**	7	25	**32**
7	ಚಾಮರಾಜನಗರ	84	46	**130**	83	20	**103**	1	26	**27**
8	ಚಿಕ್ಕಬಳ್ಳಾಪುರ	102	55	**157**	101	40	**141**	1	15	**16**
9	ಚಿಕ್ಕಮಗಳೂರು	148	79	**227**	122	58	**180**	26	21	**47**
10	ಚಿತ್ರದುರ್ಗ	123	66	**189**	123	66	**189**	0	0	**0**
11	ದಕ್ಷಿಣ ಕನ್ನಡ	150	80	**230**	129	58	**185**	21	24	**45**
12	ದಾವಣಗೆರೆ	127	69	**196**	127	28	**155**	0	41	**41**
13	ಧಾರವಾಡ	94	50	**144**	93	32	**125**	1	18	**19**
14	ಗದಗ	79	43	**122**	72	27	**99**	7	16	**23**
15	ಹಾಸನ	174	93	**267**	165	93	**258**	9	0	**9**
16	ಹಾವೇರಿ	146	78	**224**	146	45	**191**	0	33	**33**
17	ಕಲಬುರಗಿ	172	92	**264**	153	32	**185**	19	60	**79**
18	ಕೊಡಗು	68	36	**104**	61	19	**80**	7	17	**24**
19	ಕೋಲಾರ	101	55	**156**	95	38	**133**	6	17	**23**
20	ಕೊಪ್ಪಳ	99	54	**153**	92	48	**140**	7	6	**13**
21	ಮಂಡ್ಯ	151	82	**233**	147	73	**220**	4	9	**13**
22	ಮೈಸೂರು	173	93	**266**	173	93	**266**	0	0	**0**
23	ರಾಯಚೂರು	116	63	**179**	100	56	**156**	16	7	**23**
24	ರಾಮನಗರ	83	44	**127**	80	44	**124**	3	0	**3**
25	ಶಿವಮೊಗ್ಗ	176	95	**271**	151	87	**238**	25	8	**33**
26	ತುಮಕೂರು	215	116	**331**	184	105	**288**	31	12	**43**
27	ವಿಜಯಪುರ	138	75	**213**	137	72	**209**	1	3	**4**
28	ಉಡುಪಿ	103	55	**158**	85	55	**140**	18	0	**18**
29	ಉತ್ತರ ಕನ್ನಡ	150	81	**231**	147	38	**185**	3	43	**46**
30	ಯಾದಗಿರಿ	80	43	**123**	76	37	**113**	4	6	**10**
	ಒಟ್ಟು	**3903**	**2118**	**6021**	**3634**	**1660**	**5293**	**269**	**459**	**728**